ವಿಜಾಪುರ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ನೀರಾವರಿ ಕೆರೆಗಳ ಮತ್ತು ಈ ಕೆರೆಗಳಿಂದ ನೀರಾವರಿಯಾಗುತ್ತಿರುವ ಅಚ್ಚುಕಟ್ಟು ತೋರಿಸುವ ಪಟ್ಟಿ

ಕ್ರಮ ಸಂಖ್ಯೆ	ತಾಲ್ಲೂಕು	ಕೆರೆಗಳ ಸಂಖ್ಯೆ	ನೀರಾವರಿಯಾಗುತ್ತಿರುವ ಅಚ್ಚುಕಟ್ಟು
೧)	ವಿಜಾಪುರ	೨೬	೪೩೫೦
೨)	ಇಂಡಿ	೧೭	೬೬೨೯
೩)	ಬಾಗೇವಾಡಿ	೧೭	೪೦೬೨
೪)	ಜಮಖಂಡಿ	೮	೮೭೩
೫)	ಸಿಂಧಗಿ	೭	೧೬೦೭
೬)	ಮುದ್ದೇಬಿಹಾಳ್	೧೨	೨೦೨೯
೭)	ಬಾಗಲ್‌ಕೋಟೆ	೫	೧೫೭೦
೮)	ಬಾದಾಮಿ	೧೬	೩೭೫೪
೯)	ಹುನಗುಂದ	೧೩	೩೩೨೩
೧೦)	ಬೀಳಗಿ	೩	೩೧೪
೧೧)	ಮುಧೋಳ	೩	೭೯೪
	ಒಟ್ಟು	೧೨೭	೨೯೨೮೫

ಚಿಂಚೋಳಿ ತಾಲ್ಲೂಕಿನ ನೀರಾವರಿ ವ್ಯವಸ್ಥೆಯ ಬಗ್ಗೆ.

೧೭೮೮ ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಸಣ್ಣ ಹಾಗೂ ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಂಚೋಳಿ ತಾಲ್ಲೂಕಿನಲ್ಲಿರುವ ಸಣ್ಣ ಕೆರೆಗಳು ಹಾಗೂ ಏತ ನೀರಾವರಿ ಯೋಜನೆಗಳೆಷ್ಟು ?

ಆ) ಪ್ರತಿಯೊಂದು ಕೆರೆಯ ಹಾಗೂ ಏತ ನೀರಾವರಿ ಯೋಜನೆಯ ಆಯಕಟ್ಟು ಜಮೀನೆಷ್ಟು? (ವಿವರ ಒದಗಿಸುವುದು)

ಇ) ಆಯಾ ಯೋಜನೆಗಳ ಒಟ್ಟು ಆಯಕಟ್ಟಿನಲ್ಲಿ ನೀರಾವರಿಯಾಗಿರುವ ಪ್ರದೇಶವೆಷ್ಟು ?

ಈ) ನೀರಾವರಿಯಾಗದೇ ಉಳಿದಿರುವ ಜಮೀನಿನ ವಿಸ್ತೀರ್ಣವೆಷ್ಟು ಮತ್ತು ಇದು ನೀರಾವರಿಯಾಗದೇ ಇರಲು ಕಾರಣವೇನು ?

ಉ) ನೀರಾವರಿಯಾಗದೇ ಇರುವ ಜಮೀನನ್ನು ನೀರಾವರಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ಮತ್ತು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ಹಾಗೂ ಏತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ೧೬ ಸಣ್ಣ ನೀರಾವರಿ ಕೆರೆಗಳು ಮತ್ತು ೨ ಏತ ನೀರಾವರಿ ಯೋಜನೆಗಳು.

ಆ) ಮತ್ತು

ಇ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ) ೩೩೬೦ ಹೆಕ್ಟೇರುಗಳು. ನೀರಾವರಿ ಆಗದೇ ಇರುವುದಕ್ಕೆ ಮುಖ್ಯ ಕಾರಣಗಳೆಂದರೆ ಕಡಿಮೆ ಮಳೆಯಿಂದಾಗಿ, ಹಳೆಯ ಕೆರೆಗಳ ಸಾಮರ್ಥ್ಯ ಕುಂದಿರುವುದು, ಕಾಲುವೆ ಕೆಲಸಗಳು ಅಪೂರ್ಣವಾಗಿರುವುದು ಮತ್ತು ಪಂಪು ಸಾಮಗ್ರಿ ಹಳೆಯದಾಗಿರುವುದು.

ಉ) ಕೆರೆಗಳಿಗೆ ಸಾಕಷ್ಟು ನೀರು ಬುವಲ್ಲಿ ೧೨೦೭ ಹೆಕ್ಟೇರು ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ತಕ್ಷಣ ಒದಗಿಸಬಹುದು. ಕಾಮಗಾರಿಗಳಿಗೆ ಬೇಕಾದ ದುರಸ್ತಿ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಕೈಗೊಂಡು ಉಳಿದ ೨೧೫೩ ಹೆಕ್ಟೇರು ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿ ಕೆರೆಗಳ ಮತ್ತು ಏತ ನೀರಾವರಿ ಯೋಜನೆಯ ಉದ್ದೇಶಿತ ಅಚ್ಚುಕಟ್ಟು ಮತ್ತು ನೀರಾವರಿಯಾಗುತ್ತಿರುವ ಅಚ್ಚುಕಟ್ಟನ್ನು ತೋರಿಸುವ ಪಟ್ಟಿ.

ಕ್ರಮ ಸಂಖ್ಯೆ	ಕೆರೆಯ ಹೆಸರು	ಅಂದಾಜು ಹೆಕ್ಟೇರು (ಅಚ್ಚುಕಟ್ಟಿನ ಗಾತ್ರ)	ಉದ್ದೇಶಿತ ಅಚ್ಚುಕಟ್ಟು (ಹೆಕ್ಟೇರುಗಳಲ್ಲಿ)	ನೀರಾವರಿ ಯಾಗುತ್ತಿರುವ ಅಚ್ಚುಕಟ್ಟು (ಹೆಕ್ಟೇರುಗಳಲ್ಲಿ)	ನೀರಾವರಿ ಯಾಗ ಬೇಕಾದ ಅಚ್ಚುಕಟ್ಟು (ಹೆಕ್ಟೇರುಗಳಲ್ಲಿ)
೧)	ಐನಾಪುರ ಕೆರೆ	೧.೯೯	೫೯	೩೫	೨೪
೨)	ಚಿಂದನಕೆರೆ	೧.೮೯	೮೭	೨೩	೬೪
೩)	ನಿಡಗುಂಡ ಕೆರೆ	—	೪೭	೪	೪೩
೪)	ರತ್ನಳ್ ಕೆರೆ	೧.೭೩	೪೧	೨೩	೧೮
೫)	ಹುಡದಹಳ್ಳಿ ಕೆರೆ	೮.೦೦	೩೬೦	೧೦೩	೨೫೭
೬)	ಸಲಗಾರ್ ಕೆರೆ	೦.೫೦	೨೦	೧೧	೯
೭)	ಹಸರ್‌ಗುಂಡಗಿ ಕೆರೆ	೧೨.೧೦	೩೩೪	—	೩೩೪
೮)	ದೋತಿಕಲ್ ಕೆರೆ	೯.೯೯	೩೫೨	೬೨	೨೯೦
೯)	ತುಮಕಂಟಾ ಕೆರೆ	೮.೩೪	೩೦೪	೨೨೬	೭೮
೧೦)	ನಗ್ಯೆದಲ್ಯೆ ಕೆರೆ	೬.೯೫	೩೨೦	೧೧೭	೨೦೩
೧೧)	ಕೊಲ್ಲೂರು ಕೆರೆ	೨.೫೦	೧೧೩	೧೯	೯೪
೧೨)	ಮಿರಯಾನ್ ಕೆರೆ	—	೨೮	೨೨	೬
೧೩)	ಹುಲಸಗೂಡು ಕೆರೆ	೧೨.೫೩	೩೯೩	೮೭	೩೦೬
೧೪)	ಮುಕಂರಾಂಬ ಕೆರೆ	೪.೯೯	೧೯೧	೨೨	೧೬೯
೧೫)	ಚಿಕ್ಕಲಿಂಗದಹಳ್ಳಿ ಕೆರೆ (ವಿಶ್ವಬ್ಯಾಂಕ್ ನೆರವಿನ ಕಾಲುವೆ)	೫೦.೩೦	೧೦೨೦	೩೩	೯೮೭
೧೬)	ಪಂಗರಗಾ ಕೆರೆ (ವಿಶ್ವಬ್ಯಾಂಕ್ ನೆರವು)	೪೦.೦೦	೨೨೦	—	೨೨೦
		೧೬೧.೫೧	೩೮೯೯	೭೮೭	೩೧೦೨
			ಏತ ನೀರಾವರಿ ಯೋಜನೆಗಳು		
೧)	ಚಿಂಚೋಳಿ ಏತ ನೀರಾವರಿ ಯೋಜನೆ	೧.೩೪	೧೬೨	೪೫	೧೧೭
೨)	ಆನ್ವಾರ್ ಏತ ನೀರಾವರಿ ಯೋಜನೆ	೧.೧೯	೧೬೨	೨೧	೧೪೧
			೩೨೪	೬೬	೨೫೮
	ಒಟ್ಟು		೪೨೧೩	೮೫೩	೩೩೬೦